

# ಹಣತೆಯ ಹೊನಲು ಸುಗಂಧದ ಘಮಲು!

ಬೆಳಕಿನೊಂದಿಗೆ ಸುಗಂಧವನ್ನೂ ಬೀರಬಲ್ಲ, ಮನೆಗೆ ಅಲಂಕಾರವಾಗಿಯೂ ಕಾಣಬಲ್ಲ ಆರೋಮಾ ಕ್ಯಾಂಡಲ್‌ಗಳು ದೀಪಾವಳಿ ಹಬ್ಬದಲ್ಲಿ ಎಲ್ಲೆಲ್ಲೂ ರಾರಾಜಿಸುತ್ತವೆ.

■ ಎಸ್ಸೆನ್

ದೀಪಾವಳಿ ಹಬ್ಬಕ್ಕೆ ತಯಾರಿ ವಿಷಯ ಬರುತ್ತಿದ್ದಂತೆ ಮೊದಲು ಯೋಚನೆ ಹೊರಳುವುದೇ ಹಣತೆಗಳ ಬಗ್ಗೆ. ಯಾವ ರೀತಿಯ ದೀಪವಿದ್ದರೆ ಚೆಂದ? ಮನೆಯ ಒಳಗೆ, ಹೊರಗೆ ಒಪ್ಪುವಂಥ, ಮನೆಯಂಗಳವನ್ನು ಚಂದಗಾಣಿಸುವಂಥ ವಿನ್ಯಾಸದ ದೀಪಗಳು ಯಾವುವು? ಹೆಚ್ಚು ಸಮಯ ಬೆಳಕು ಬೀರುವಂಥ ಹಣತೆ ಯಾವುದು? ಹೀಗೆ ದೀಪಗಳ ಆಯ್ಕೆಯಲ್ಲಿ ಪ್ರಶ್ನೆಗಳು ಹಲವು.

ದೀಪಗಳ ಹಬ್ಬವಾದ್ದರಿಂದ ದೀಪಗಳಲ್ಲಿ ವಿಶೇಷತೆ ಇದ್ದೇ ಇರಬೇಕು ಎಂದು ಬಯಸುವುದು ಸಹಜವೇ. ಆ ನಿರೀಕ್ಷೆಯನ್ನು ಪೂರೈಸಲೆಂಬಂತೆ ಬೀದಿ ಬೀದಿಗಳಲ್ಲಿಯೂ ಥರಾವರಿ ದೀಪಗಳ ಮಾರಾಟ ಜೋರಾಗುತ್ತದೆ. ಅವುಗಳಲ್ಲಿ 'ಅರೋಮಾ ಕ್ಯಾಂಡಲ್'ಗಳು ಕೂಡ ಜಾಗ ಗಿಟ್ಟಿಸಿಕೊಂಡಿವೆ.



ಬೆಳಕು ಧನಾತ್ಮಕತೆಯ ಸಂಕೇತ. ಬೆಳಕಿನೊಂದಿಗೆ ಪರಿಮಳ ಸೇರಿದರೆ ಮನಸ್ಸು ಮತ್ತಷ್ಟು ಉಲ್ಲಸಿತಗೊಳ್ಳುತ್ತದೆ. ಮನೆಯನ್ನು ಬೆಳಕಿನಿಂದ ಸುಂದರವಾಗಿ ಕಾಣುವಂತೆ ಮಾಡುವ, ಕಲಾತ್ಮಕ ಸ್ಪರ್ಶ ನೀಡುವ, ಮನೆಯ ತುಂಬಾ ಸುವಾಸನೆ ತುಂಬಿರುವಂತೆ ಮಾಡಬಲ್ಲ ಈ ಸುಗಂಧಭರಿತ ಮೇಣದ ಬತ್ತಿಗಳು ಹೆಚ್ಚು ಚಾಲ್ತಿಗೆ ಬರುತ್ತಿವೆ.

ಬಳಕೆ ಹೆಚ್ಚಾಗುತ್ತಿದ್ದಂತೆ ಇವುಗಳ ಆಕಾರ, ವಿನ್ಯಾಸ, ಬಣ್ಣ ಹಾಗೂ ಫ್ಲೇವರ್‌ಗಳಲ್ಲಿಯೂ ಹಲವು ಆಕರ್ಷಕ ಆಯ್ಕೆಗಳು ಬಂದಿವೆ. ಮನೆಗೆ ಬರುವ ಅತಿಥಿಗಳಿಗೆ ಈ ಸಮಯದಲ್ಲಿ ಉಡುಗೊರೆಯಾಗಿ ನೀಡಲೂ ಈ ದೀಪಗಳನ್ನು ನೀಡಲಾಗುತ್ತಿದೆ. ತೇಲುವ ಕ್ಯಾಂಡಲ್‌ಗಳು ಹಬ್ಬದ ಸಮಯದಲ್ಲಿ ಗೃಹಾಲಂಕಾರಕ್ಕೆ ಹೇಳಿಮಾಡಿಸಿದಂತಿವೆ. ಹೂವುಗಳ ನಡುವೆ, ನೀರಿನ ನಡುವೆ ತೇಲುವಂತೆ ಇಡುವ ಈ ದೀಪಗಳು ಮನೆಗೆ ಮೆರುಗು ತುಂಬುವುದರ ಜೊತೆಗೆ ಕಣ್ಣಿಗೂ ಹಿತವೆನಿಸುವ ಭಾವ ತುಂಬುತ್ತವೆ.

ಸೆಂಟೆಡ್ ಕ್ಯಾಂಡಲ್‌ಗಳಲ್ಲಿ ವೆನಿಲ್ಲಾ, ಲ್ಯಾವೆಂಡರ್, ಕಾಫಿ, ಗುಲಾಬಿ, ಚಕ್ಕೆ, ಚಾಕೊಲೇಟ್, ಲಾವಂಚ, ಚಂದನ, ಮಜ್ಜಿಗೆ ಹುಲ್ಲಿನ ಫ್ಲೇವರ್‌ಗಳು ಪ್ರಸಿದ್ಧವಾಗಿವೆ. ಒಂದೊಂದು ಭಾವದ ಸಂಕೇತವಾಗಿರುವ ಒಂದೊಂದು ಬಣ್ಣಗಳ ಕ್ಯಾಂಡಲ್‌ಗಳನ್ನು ಅಭಿಲಾಷೆಗೆ ತಕ್ಕಂತೆ ಬಳಸಲಾಗುತ್ತಿದೆ.

ಶಾಂತಿಗೆ ಬಿಳಿ ಬಣ್ಣ, ಪ್ರೀತಿಯ ಪ್ರತೀಕವಾಗಿ ಕೆಂಪು, ಸುರಕ್ಷತೆಯಾಗಿ ನೀಲಿ, ಸಂಪತ್ತಿಗೆ ಕೇಸರಿ, ಆರೋಗ್ಯಕ್ಕೆ ಹಸಿರು, ಹೀಗೆ ಹಲವು ಬಣ್ಣದ ಕ್ಯಾಂಡಲ್‌ಗಳನ್ನು ಪ್ರತ್ಯೇಕ ಉದ್ದೇಶವಾಗಿ ಬಳಸಲಾಗುತ್ತಿದೆ. ಚೇತನ ತುಂಬಬಲ್ಲ ಪರಿಮಳವನ್ನು ಬಳಸಲಾಗುವುದರಿಂದ ಮನೆಯಲ್ಲಿ ಆಹ್ಲಾದಕರ ವಾತಾವರಣ ಉಂಟುಮಾಡುತ್ತದೆ.

ಎಣ್ಣೆ ಹಾಕುವ ಕಿರಿಕಿರಿಯಿಲ್ಲದ, ಹೆಚ್ಚು ಸಮಯ ಉರಿಯಬಲ್ಲ ಈ ದೀಪಗಳು ಈಗ ಬಹು ಜನರ ಆಯ್ಕೆಗಳಾಗಿ ಗಮನಸೆಳೆಯುತ್ತಿವೆ. ಆದರೆ ಅರೊಮಾ ಕ್ಯಾಂಡಲ್‌ಗಳನ್ನು ಖರೀದಿಸುವಾಗ ಜೋಪಾನ ವಹಿಸುವುದು ಮುಖ್ಯ. ಕೆಲವು ಅರೋಮಾ ಕ್ಯಾಂಡಲ್‌ಗಳು ಮನೆಯ ಒಳಾಂಗಣದ ಗಾಳಿಯನ್ನು ಕಲುಷಿತಗೊಳಿಸುವುದಲ್ಲದೆ, ಉಸಿರಾಟದ ತೊಂದರೆ ಇರುವವರಿಗೂ ಸಮಸ್ಯೆ ಉಂಟು ಮಾಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಕಳಪೆ ಗುಣಮಟ್ಟದ, ಪ್ಯಾರಫೀನ್ ವ್ಯಾಕ್ಸ್‌ನಿಂದ ತಯಾರಿಸಿದ ಕ್ಯಾಂಡಲ್‌ಗಳು ಪರಿಸರಕ್ಕೂ, ಆರೋಗ್ಯಕ್ಕೂ ಮಾರಕವಾಗಿದ್ದು, ಉತ್ತಮ ಗುಣಮಟ್ಟದ ಕ್ಯಾಂಡಲ್‌ಗಳ ಆಯ್ಕೆ ಮಾಡಬೇಕಾಗಿದೆ. ಇದೇ ಹಿನ್ನೆಲೆಯಲ್ಲಿ ಸೋಯಾ ವ್ಯಾಕ್ಸ್‌ನಿಂದ ತಯಾರಿಸಿದ ಕ್ಯಾಂಡಲ್‌ಗಳು ಲಗ್ಗೆ ಇಟ್ಟಿದ್ದು, ಆರೋಗ್ಯಕ್ಕೂ, ಪರಿಸರಕ್ಕೂ ಪೂರಕವಾಗಿವೆ. ಆನ್‌ಲೈನ್ ಮಾರುಕಟ್ಟೆಗಳಲ್ಲಿ ಇವು ಲಭ್ಯ.

ಮನೆ ಮನಸ್ಸನ್ನು ಬೆಳಗಿಸುವ ದೀಪಾವಳಿ ಹಬ್ಬದಲ್ಲಿ ನಮ್ಮ ಬದುಕನ್ನು, ಜೊತೆಗೆ ಪರಿಸರವನ್ನು ಬೆಳಕಿನ ದಾರಿಯಲ್ಲಿ ಸಾಗಿಸುವುದು ನಮ್ಮ ಕರ್ತವ್ಯವೂ ಆಗಿದೆ. ■

